# CCE PR

ಸಂಕೇತ ಸಂಖ್ಯೆ : **96-K** ವಿಷಯ : **ಅರ್ಥಶಾಸ್ತ್ರ**

**Code No. : 96-K** **Subject : ECONOMICS**

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

***ಸಾಮಾನ್ಯ ಸೂಚನೆಗಳು :***

i) ಈ ಪ್ರಶ್ನೋತ್ತರ ಕಿರುಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 57 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಯ ಉತ್ತರಕ್ಕಾಗಿ ಜಾಗವನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಗಳ ಉತ್ತರಗಳಿಗೆ ಸಾಕಷ್ಟು ಜಾಗವನ್ನು ನೀಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಸೀಸದ ಕಡ್ಡಿ (ಪೆನ್ಸಿಲ್) ಯಿಂದ ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು–ಆಯ್ಕೆ ಪ್ರಶ್ನೆಗಳನ್ನು ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

viii) ನಿಮ್ಮ ಪ್ರಶ್ನೋತ್ತರ ಕಿರುಪುಸ್ತಕದ ಬಲಭಾಗದಲ್ಲಿರುವ ಗೆರೆಯ ಪಕ್ಕದ ಖಾಲಿ ಜಾಗದಲ್ಲಿ ಯಾವುದೇ ರೀತಿಯ ಬರಹಗಳನ್ನು ಬರೆಯಬಾರದು.

I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $10 \times 1 = 10$

1. ಭಾರತದ ಅತ್ಯಂತ ಪ್ರಮುಖವಾದ ಆಮದು ವಸ್ತುವೆಂದರೆ,

   (A) ಪೆಟ್ರೋಲಿಯಂ (B) ಆಹಾರ ಪದಾರ್ಥಗಳು

   (C) ಯಂತ್ರಗಳು (D) ಚಿನ್ನ

2. ಭಾರತದಲ್ಲಿ ಕರೆನ್ಸಿ ನೋಟುಗಳು ಮತ್ತು ನಾಣ್ಯಗಳನ್ನು ಚಲಾವಣೆ ಮಾಡುವವರು,

   (A) ಭಾರತೀಯ ರಿಸರ್ವ್ ಬ್ಯಾಂಕ್ (B) ಸಹಕಾರಿ ಬ್ಯಾಂಕ್‌ಗಳು

   (C) ಬ್ಯಾಂಕ್ ಆಫ್ ಇಂಡಿಯಾ (D) ಅಪೆಕ್ಸ್ ಬ್ಯಾಂಕ್

3. ಸಾರಿಗೆಗಳಲ್ಲೇ ಆಗ್ಗವಾದದ್ದು ಇದು

   (A) ರಸ್ತೆ ಸಾರಿಗೆ (B) ರೈಲು ಸಾರಿಗೆ

   (C) ಜಲ ಸಾರಿಗೆ (D) ವಾಯು ಸಾರಿಗೆ

4. ಇವುಗಳಲ್ಲಿ ಕಡಿಮೆ ತಲಾದಾಯವನ್ನು ಹೊಂದಿದ ರಾಷ್ಟ್ರ

   (A) ಭಾರತ (B) ಅಮೆರಿಕಾ

   (C) ಇಂಗ್ಲೆಂಡ್ (D) ರಷ್ಯಾ

5. ಕೃಷಿ ಕಾರ್ಮಿಕ ಜೀವನ ಸ್ಥಿತಿ ಶೋಚನೀಯವಾಗಿದೆ. ಏಕೆಂದರೆ,

   (A) ಅವರು ಐಷಾರಾಮಿ ಜೀವನವನ್ನು ನಡೆಸುತ್ತಾರೆ

   (B) ಅವರು ಇತರೆ ಕಾರ್ಮಿಕರಿಗೆ ಹೋಲಿಸಿದರೆ ಅತ್ಯಂತ ಕಡಿಮೆ ಕೂಲಿಯನ್ನು ಪಡೆಯುತ್ತಾರೆ

   (C) ಇತರೆ ಕಾರ್ಮಿಕರಿಗೆ ಹೋಲಿಸಿದರೆ ಹೆಚ್ಚು ಕೂಲಿಯನ್ನು ಪಡೆಯುತ್ತಾರೆ

   (D) ಸರ್ಕಾರದ ನಿಯಮಾವಳಿಗಳು ಇವರಿಗೆ ಸಹಕಾರಿಯಾಗಿಲ್ಲ

6. ಸಾಂಸ್ಥಿಕೇತರ ಹಣಕಾಸಿನ ಮೂಲದ ಪ್ರಮುಖ ಉದಾಹರಣೆಯೆಂದರೆ,

(A) ವಾಣಿಜ್ಯ ಬ್ಯಾಂಕ್‌ಗಳು (B) ಭೂ ಅಭಿವೃದ್ಧಿ ಬ್ಯಾಂಕ್

(C) ಜೀವವಿಮಾ ಕಂಪನಿಗಳು (D) ಲೇವಾದೇವಿಗಾರರು

7. ಹಸಿರುಕ್ರಾಂತಿ ಎಂದರೆ,

(A) ಹಣ್ಣುಗಳ ಉತ್ಪಾದನೆಯಲ್ಲಿನ ಹೆಚ್ಚಳ

(B) ಕೃಷಿ ಉತ್ಪಾದನೆಯಲ್ಲಿನ ಹೆಚ್ಚಳ

(C) ಹಾಲಿನ ಉತ್ಪಾದನೆಯಲ್ಲಿನ ಹೆಚ್ಚಳ

(D) ಮೀನಿನ ಉತ್ಪಾದನೆಯಲ್ಲಿನ ಹೆಚ್ಚಳ

8. ಜನನ ಪ್ರಮಾಣವನ್ನು ನಿಯಂತ್ರಿಸಲು ಇದು ಒಂದು ವಿಧ

(A) ವಿವಾಹವಾಗುವುದು

(B) ಗಂಡು ಮಗುವಿನ ಜನನಕ್ಕೆ ಹಾತೊರೆಯುವುದು

(C) ಕುಟುಂಬ ಯೋಜನೆ

(D) ಪ್ರಣಾಳ ಶಿಶುವಿನ ಜನನಕ್ಕೆ ಪ್ರೋತ್ಸಾಹ

9. ಅಲ್ಯೂಮಿನಿಯಂನ ತಯಾರಿಕೆಗೆ ಅತ್ಯವಶ್ಯವಾದ ಕಚ್ಚಾವಸ್ತು

(A) ಕಬ್ಬಿಣದ ಅದಿರು (B) ಮ್ಯಾಂಗನೀಸ್ ಅದಿರು

(C) ಬಾಕ್ಸೈಟ್ ಅದಿರು (D) ತಾಮ್ರ

10. 'ಒಂದು ರಾಷ್ಟ್ರವು ಬಡರಾಷ್ಟ್ರವಾಗಿರುವುದಕ್ಕೆ ಬಡತನವಾಗಿದೆ'. ಎಂದು ಹೇಳಿದವರು

(A) ರಾಗ್ನರ್ ನರ್ಕ್ಸ್ (B) ಆ್ಯಡಂ ಸ್ಮಿತ್

(C) ಮಾರ್ಷಲ್ (D) ಕೇನ್ಸ್

II. ಈ ಕೆಳಗಿನ ಪ್ರಶ್ನೆಗಳಿಗೆ ***ಒಂದೊಂದು*** ವಾಕ್ಯದಲ್ಲಿ ಉತ್ತರ ಬರೆಯಿರಿ : $14 \times 1 = 14$

11. ವ್ಯಾಪಾರ ಎಂದರೇನು ?

12. ವಿದೇಶಿ ವಿನಿಮಯ ಎಂದರೇನು ?

13. ಭಾರತೀಯ ರಿಸರ್ವ್ ಬ್ಯಾಂಕನ್ನು ಯಾವಾಗ ಸ್ಥಾಪಿಸಲಾಯಿತು ?

14. ಅತ್ಯಂತ ವೇಗದ ಸಾರಿಗೆ ಯಾವುದು ?

15. ಬಡತನವನ್ನು ವ್ಯಾಖ್ಯಾನಿಸಿ.

16. ಭಾರತದಲ್ಲಿ ಕೈಗಾರಿಕಾ ಎಸ್ಟೇಟ್‌ಗಳನ್ನು ಸ್ಥಾಪಿಸಲು ಕಾರಣವೇನು ?

17. ಭಾರತದಲ್ಲಿ ಸಾರ್ವಜನಿಕ ವಲಯದ ಕೈಗಾರಿಕೆಗಳು ಯಾರ ಒಡೆತನದಲ್ಲಿರುತ್ತವೆ ?

18. ಕೃಷಿ ಹಣಕಾಸಿನ ಅತ್ಯುನ್ನತ ಬ್ಯಾಂಕ್ ಯಾವುದು ?

19. ಹಸಿರು ಕ್ರಾಂತಿಯ ಪಿತಾಮಹ ಯಾರು ?

20. ಭಾರತದಲ್ಲಿ ಅತ್ಯಧಿಕ ಜನಸಾಂದ್ರತೆ ಹೊಂದಿರುವ ರಾಜ್ಯ ಯಾವುದು ?

21. ಮಾನವ ಶಕ್ತಿ ಯೋಜನೆ ಎಂದರೇನು ?

22. ಭೂಸವೆತ ಎಂದರೇನು ?

23. ಭೂ ಬಳಕೆ ಎಂದರೇನು ?

24. ಅಭಿವೃದ್ಧಿಯನ್ನು ವ್ಯಾಖ್ಯಾನಿಸಿ.

III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ***ಮೂರರಿಂದ ನಾಲ್ಕು*** ವಾಕ್ಯಗಳಲ್ಲಿ ಉತ್ತರಿಸಿ : $25 \times 2 = 50$

25. ಭಾರತದ ಪ್ರಮುಖ ರಫ್ತುಗಳನ್ನು ಹೆಸರಿಸಿ.

26. ಆಂತರಿಕ ಮತ್ತು ವಿದೇಶಿ ವ್ಯಾಪಾರದ ನಡುವಿನ ವ್ಯತ್ಯಾಸಗಳೇನು ?

27. ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಮುಖ ಪ್ರಕಟಣೆಗಳನ್ನು ತಿಳಿಸಿ.

28. ದೂರಸಂಪರ್ಕ ಸಾಧನಗಳು ಯಾವುವು ?

29. ಯಾವುದಾದರೂ ನಾಲ್ಕು ಬಡತನ ನಿರ್ಮೂಲನಾ ಕಾರ್ಯಕ್ರಮಗಳನ್ನು ಹೆಸರಿಸಿ.

30. ಕೈಗಾರಿಕಾ ಕಾರ್ಮಿಕರು ತಮ್ಮ ಬೇಡಿಕೆಯನ್ನು ಮಾಲೀಕರ ಮುಂದಿಡಲು ಬಳಸುವ ಪ್ರಮುಖ ಅಸ್ತ್ರಗಳಾವುವು ?

31. ಭಾರತದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳ ಅಭಿವೃದ್ಧಿಗಾಗಿ ಸರ್ಕಾರವು ಕೈಗೊಂಡಿರುವ ಯಾವುದಾದರೂ ನಾಲ್ಕು ಕ್ರಮಗಳನ್ನು ತಿಳಿಸಿ.

32. 1973 ರ ಫೆರಾ ಕಾಯ್ದೆಯ ಪ್ರಮುಖ ಅಂಶಗಳು ಯಾವುವು ?

33. ಸಣ್ಣ ಪ್ರಮಾಣದ ಕೈಗಾರಿಕೆಗಳ ಮಹತ್ವವನ್ನು ಬರೆಯಿರಿ.

34. ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಪ್ರಮುಖ ಉದ್ದೇಶಗಳನ್ನು ತಿಳಿಸಿ.

35. ತುಂತುರು ನೀರಾವರಿಯ ಪ್ರಯೋಜನಗಳು ಯಾವುವು ?

36. ಜನಸಂಖ್ಯಾ ಸ್ಫೋಟದಿಂದ ಉಂಟಾಗುವ ಪರಿಣಾಮಗಳೇನು ?

37. ಅರಣ್ಯಗಳ ನಾಲ್ಕು ಉಪಯೋಗಗಳನ್ನು ಬರೆಯಿರಿ.

38. ಕಲ್ಲಿದ್ದಲಿನ ವಿಧಗಳಾವುವು ?

39. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಲಕ್ಷಣಗಳನ್ನು ಪಟ್ಟಿಮಾಡಿ.

40. ಭೂಸವೆತದಿಂದಾಗುವ ದುಷ್ಪರಿಣಾಮಗಳು ಯಾವುವು ?

41. ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲಗಳನ್ನು ಹೆಸರಿಸಿ.

42. ಭಾರತದಲ್ಲಿ ಜನಸಂಖ್ಯಾ ಏರಿಕೆಗೆ ಕಾರಣವಾದ ಅಂಶಗಳು ಯಾವುವು ?

43. ಸಣ್ಣ ಕೈಗಾರಿಕೆಗಳ ಸಮಸ್ಯೆಗಳೇನು ?

44. ಇತ್ತೀಚಿನ ದಿನಗಳಲ್ಲಿ ನೀರಿನ ಮೇಲಿನ ವೆಚ್ಚದ ಪ್ರಮಾಣವು ಹೆಚ್ಚಾಗುತ್ತಿದೆ. ಏಕೆ ?

45. ನವೀಕರಿಸಲಾಗದ ಸಂಪನ್ಮೂಲಗಳಿಗೆ ಉದಾಹರಣೆ ಕೊಡಿ.

46. ಭೂ ಸವೆತಕ್ಕೆ ಪ್ರಮುಖ ಕಾರಣಗಳು ಯಾವುವು ?

47. ಸೌರಶಕ್ತಿಯನ್ನು ಹೇಗೆ ಬಳಸುತ್ತಿದ್ದೇವೆ ?

48. ದೇಶದ ಆರ್ಥಿಕತೆಯಲ್ಲಿ ನೈಸರ್ಗಿಕ ಸಂಪನ್ಮೂಲಗಳ ಪಾತ್ರವೇನು ?

49. ಭಾರತದಲ್ಲಿ ಸ್ಥಾಪಿಸಲಾಗಿರುವ ಯಾವುದಾದರೂ ನಾಲ್ಕು ಅಣುಶಕ್ತಿ ಕೇಂದ್ರಗಳನ್ನು ಹೆಸರಿಸಿ.

IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ **ಐದರಿಂದ ಆರು** ವಾಕ್ಯಗಳಲ್ಲಿ ಉತ್ತರಿಸಿ : $6 \times 3 = 18$

50. ಭಾರತೀಯ ರಿಸರ್ವ್ ಬ್ಯಾಂಕಿನ ಕೇಂದ್ರ ಮಂಡಳಿಯ ರಚನೆಯನ್ನು ವಿವರಿಸಿ.

***ಅಥವಾ***

ಭಾರತೀಯ ರಿಸರ್ವ್ ಬ್ಯಾಂಕಿನ ತರಬೇತಿ ಸಂಸ್ಥೆಗಳು ಯಾವುವು ?

51. ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಸಾರಿಗೆಯ ಪಾತ್ರವೇನು ?

***ಅಥವಾ***

ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಸಂಪರ್ಕ ವ್ಯವಸ್ಥೆಯ ಪಾತ್ರವೇನು ?

52. ಭಾರತದಲ್ಲಿ ಕೃಷಿ ಹಣಕಾಸಿನ ಅಗತ್ಯತೆಯನ್ನು ತಿಳಿಸಿ.

***ಅಥವಾ***

ಹಣದ ಲೇವಾದೇವಿಗಾರರ ಅನುಕೂಲ ಮತ್ತು ಅನಾನುಕೂಲಗಳನ್ನು ತಿಳಿಸಿ.

53. ಹಸಿರು ಕ್ರಾಂತಿಯ ಪ್ರಯೋಜನಗಳನ್ನು ಪಟ್ಟಿ ಮಾಡಿ.

***ಅಥವಾ***

ಹನಿ ನೀರಾವರಿಯ ಪ್ರಮುಖ ಪ್ರಯೋಜನಗಳನ್ನು ಪಟ್ಟಿ ಮಾಡಿ.

54. ಭಾರತದಲ್ಲಿ ಜನಸಂಖ್ಯಾ ನಿಯಂತ್ರಣಕ್ಕೆ ವಿವಿಧ ಕ್ರಮಗಳು ಯಾವುವು ?

***ಅಥವಾ***

ಜನಸಾಂದ್ರತೆಯನ್ನು ಪ್ರಭಾವಿಸುವ ಅಂಶಗಳು ಯಾವುವು ?

55. ಅಭಿವೃದ್ಧಿ ಮತ್ತು ಅನಭಿವೃದ್ಧಿ ರಾಷ್ಟ್ರಗಳ ನಡುವಿನ ವ್ಯತ್ಯಾಸವೇನು ?

***ಅಥವಾ***

ಅಭಿವೃದ್ಧಿ ಹೊಂದಿದ ರಾಷ್ಟ್ರದ ಲಕ್ಷಣಗಳು ಯಾವುವು ?

V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ***ಎಂಟರಿಂದ ಹತ್ತು*** ವಾಕ್ಯಗಳಲ್ಲಿ ಉತ್ತರಿಸಿ : $2 \times 4 = 8$

56. ಭಾರತದಲ್ಲಿ ಬಡತನಕ್ಕೆ ಪ್ರಮುಖ ಕಾರಣಗಳನ್ನು ವಿವರಿಸಿ.

57. ಕೈಗಾರಿಕಾ ಕಾರ್ಮಿಕರ ಸಾಮಾಜಿಕ ಭದ್ರತಾ ಕ್ರಮಗಳನ್ನು ಬರೆಯಿರಿ.